**(ಇಂದು ದಿನಾಂಕ 16-10-2025 ರಂದು ಮಧ್ಯಂತರ ಅರ್ಜಿ ನಂಃ 4 ಮತ್ತು 5 ರ ಆದೇಶದನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಎಂ ಕೆ ಎ ವಕೀಲರಿಂದ**

ಅಪಘಾತದ ದಿನ ನಾವು ಧಾರವಾಡದಿಂದ ದಾಂಡೇಲಿಗೆ ಹೋಗುತ್ತಿದ್ದೆವು ಎಂದರೆ ಸರಿ . ಸಾಮಾನ್ಯವಾಗಿ ವಾಹನವನ್ನು ಚಲಾಯಿಸುವಾಗ ರಸ್ತೆಯ ಎಡಬದಿಯಲ್ಲಿ ಹೋಗಬೇಕು ಎಂದರೆ ಸರಿ . ಅಪಘಾತ ಸ್ಥಳವು ರಸ್ತೆಯ ಬಲಬದಿಯಲ್ಲಿದೆ ಎಂದರೆ ಸರಿ . ಅಪಘಾತವಾದಾಗ ಸಮಯ ಬೆಃ 6.45 ಆಗಿತ್ತು ಎಂದರೆ ಸರಿ . ಸಾಮಾನ್ಯವಾಗಿ ಬೆಳಗಿನ ವೇಳೆಯಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ಕಡಿಮೆ ಇರುತ್ತದೆ ಎಂದರೆ ಸರಿ . ಅಪಘಾತವಾದ ಸ್ಥಳದಲ್ಲಿ ರಸ್ತೆಯು 50-60 ಅಡಿ ಅಗಲ ಇದೆ ಎಂದರೆ ಸಾಕ್ಷಿಯು 30 ಅಡಿ ಅಗಲ ಇದೆ ಎಂದು ಹೇಳುತ್ತಾರೆ . ಅಪಘಾತ ಸ್ಥಳವು 40-50 ಅಡಿ ಅಗಲವಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಅರ್ಜಿದಾರರ ಹಾನಿಗೊಳಗಾದ ಕಟ್ಟಡವು ರಸ್ತೆಯಿಂದ 15 ಅಡಿ ಬಿಟ್ಟು ಆಚೆ ಇದೆ ಎಂದರೆ ಸಾಕ್ಷಿಯ 8-10 ಅಡಿ ಆಚೆ ಇದೆ ಎಂದು ಹೇಳುತ್ತಾರೆ . ಅಪಘಾತವಾದಾಗ ನನ್ನ ಬಸ್ಸು ತಗಡಿನ ಕಂಪೌಂಡ ಗೋಡೆಯನ್ನು ಜಕಂ ಮಾಡಿ ನಂತರ ಕಟ್ಟಡ ಗೋಡೆಗೆ ಜಕಂ ಮಾಡಿದೆ ಎಂದರೆ ಸರಿ . ಅರ್ಜಿದಾರರ ಕಟ್ಟಡದಲ್ಲಿದ್ದ ವಿದ್ಯುತ ಮೀಟರ್ ಹಾಗೂ ಯಂತ್ರೋಪಕರಣಗಳನ್ನು ಹಾನಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಅಪಘಾತದ ಪರಿಣಾಮ ಅರ್ಜಿದಾರರ ಕಟ್ಟಡದಲ್ಲಿದ್ದ ಬೆಲೆ ಬಾಳುವ ವಸ್ತುಗಳನ್ನು ಹಾನಿಗೊಳಿಸಿದ್ದೇನೆ ಎಂದರೆ ಸರಿಯಲ್ಲ . ಅಪಘಾತದ ಪರಿಣಾಮ ಅರ್ಜಿದಾರರ ಕಟ್ಟಡದ ಮುಖ್ಯ ಪಿಲ್ಲರಿಗೆ ಹಾನಿ

ಮಾಡಿ ಅದರನ್ವಯ ಸಂಪೂರ್ಣ ಕಟ್ಟಡ ಹಾನಿಮಾಡಿದ್ದೇನೆ ಎಂದರೆ ಸರಿಯಲ್ಲ . ಅಪಘಾತವು ನನ್ನ ವಾಹನದ ಯಾಂತ್ರಿಕ ದೋಷದಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅಪಘಾತದ ಸಮಯದಲ್ಲಿ ನಾನು ನನ್ನ ವಾಹನವನ್ನು 100 ರಿಂದ 120 ಪ್ರತಿ ಗಂಟೆಗೆ ಕಿಲೋ ಮೀಟರ ವೇಗದಲ್ಲಿ ಚಲಾಯಿಸುತ್ತಿದ್ದೆ ಎಂದರೆ ಸರಿಯಲ್ಲ . ನನ್ನ ವಾಹನವು ಯಾಂತ್ರಿಕ ದೋಷದಿಂದ ಬಳಲುತ್ತಿದ್ದರೆ ಅದನ್ನು ರಸ್ತೆಯಎಡಬದಿಗೆ ನಿಲ್ಲಿಸಬಹುದಾಗಿತ್ತು ಆದರೆ ನನ್ನ ವಾಹನ ಸುಸ್ಥಿತಿಯಲ್ಲಿ ಇದ್ದ ಕಾರಣ ಅದನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಅಪಘಾತಪಡಿಸಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳಿದಂತೆ ವಾಹನವು ಯಾವುದೇ ಯಾಂತ್ರಿಕ ದೋಷದಿಂದ ಬಳಲುತ್ತಿರಲಿಲ್ಲ ಹಾಗೆ ಬಳಲುತ್ತಿದ್ದರೆ ನಾನು ಅದಕ್ಕೆ ಪೂರಕವಾದ ದಾಖಲೆ ಹಾಜರುಪಡಿಸುತ್ತಿದ್ದೆ , ಆ ರೀತಿಯ ದಾಖಲೆ ಹಾಜರುಪಡಿಸದೇ ಇರುವ ಕಾರಣ ಅಪಘಾತವು ನನ್ನ ಅಜಾರೂಕತೆಯ ಪರಿಣಾಮ ಆಗಿದೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.